<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಬಿ.ಎಂ.ಎಸ್., ವಕೀಲರಿಂದಃ</u>

ಸಾಕ್ಷಿಗೆ ಪರಸ್ಪರ ಒಡಂಬಡಿಕೆ ಪತ್ರವನ್ನು ತೋರಿಸಲಾಗಿ ಸದರಿ ದಾಖಲೆಯನ್ನು ನಾನು ಹಾಗೂ ಪ್ರತಿವಾದಿಯು ಸೇರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಅಂತ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿಃ 6 ಅಂತ ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ಒತ್ತಾಯ ಮಾಡಿದ್ದರಿಂದ ನಿಡಿಃ 6 ದಾಖಲೆಯನ್ನು ಮಾಡಿಕೊಂಡಿರುತ್ತೇವೆ ಅಂತ ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ನಾನು ದಿಃ 19.09.2023 ರಂದು ಪಾಟೀ ಸವಾಲಿನಲ್ಲಿ ಪುಟ ಸಂಖ್ಯೆ : 28 ರ 2 ನೇ ಪ್ಯಾರಾದಲ್ಲಿ 7 ಮತ್ತು 8 ನೇ ಸಾಲಿನಲ್ಲಿ ಅದೇ ರೀತಿ ಪರಸ್ಪರ ಒಡಂಬಡಿಕೆ ಪತ್ರದಲ್ಲಿ ನಮೂದಿಸಿದಂತೆ ಪರಸ್ಪರ ಒಪ್ಪಿಗೆ ಮೇರೆಗೆ ಒಡಂಬಡಿಕೆ ಪತ್ರದ ಆಗಿರುತ್ತದೆ ಎಂದರೆ ಸರಿ ಅಂತ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ ಅಂತ ಒಪ್ಪಿಕೊಂಡಿದ್ದರಿಂದ ಸದರಿ ಪಾಟೀ ಸವಾಲನ್ನು ನಿಡಿಃ 7 ಅಂತ, ಒಪ್ಪಿಕೊಂಡ ಭಾಗವನ್ನು ನಿಡಿಃ 7(ಎ) ಅಂತ ಗುರುತಿಸಲಾಯಿತು.

ನಿಡಿಃ 6 ರ 2 ನೇ ಪ್ಯಾರಾದಲ್ಲಿ 2 ನೇ ಪಾರ್ಟಿಯಾದ ಆರ್,ಹೆಚ್. ಸುರೇಶ್ ಆದ ಇವರು 2 ನೇ ಪಾರ್ಟಿಯಾದ ನಾಗರಾಜ್ ಬಾಬು .ಆರ್. ಇವರಿಂದ ರೂ. 1,02,00,000/- ಸಾಲವಾಗಿ ಪಡೆದಿರುತ್ತಾರೆ. ಸದರಿ ಸಾಲಕ್ಕೆ ವಾರ್ಷಿಕ ಶೇಕಡಾ 24 ರಷ್ಟು ಬಡ್ಡಿ ------------------------ ಪಡೆದ ಸಾಲದ ಭದ್ರತೆಗಾಗಿ ಚಳ್ಳಕೆರೆ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡಿಸಿಕೊಟ್ಟಿರುತ್ತಾರೆ ಅಂತ ನಮೂದು ಇರುತ್ತದೆ ಎಂದರೆ ಸರಿ. ಸದರಿ ಒಪ್ಪಿಕೊಂಡ ಅಂಶವನ್ನು ನಿಡಿಃ 6(ಎ) ಅಂತ ಗುರುತಿಸಲಾಯಿತು.

ಪರಸ್ಪರ ಒಡಂಬಡಿಕೆ ಕರಾರುಪತ್ರ ದಿಃ 23.09.2017 ರಿಂದ ಪ್ರಾರಂಭವಾಗಿರುತ್ತದೆ ಎಂದರೆ ಸರಿ. 2017 ರಿಂದ 2019 ರ ವರೆಗೆ ಪ್ರತಿವಾದಿಯ ಬಡ್ಡಿ ಬಾಬ್ತು ರೂ. 39,35,000/- ಹಣ ಕೊಟ್ಟಿರುತ್ತಾರೆ. 2019 ಯಾವ ತಿಂಗಳಲ್ಲಿ ಬಡ್ಡಿ ಕೊಡುವುದು ಬಾಕಿ ಇರುತ್ತದೆ ಅಂತ ನನಗೆ ನೆನಪಿಲ್ಲ. ರೂ. 1,02,00,000/- ಗೆ ತಿಂಗಳಿಗೆ ರೂ. 2,04,000/- ಬಡ್ಡಿ ಆಗುತ್ತದೆ ಎಂದರೆ ಸರಿ. ದಿಃ 22.04.2019 ಕ್ಕೆ ಪರಸ್ಪರ ಒಡಂಬಡಿಕೆ ಪತ್ರದ ಪ್ರಕಾರ ಬಡ್ಡಿಯು ಕೊನೆಗೊಳ್ಳುತ್ತದೆ ಎಂದರೆ ಸಾಕ್ಷಿಯು ನಾನು ಕೂಡ ಲೆಕ್ಕಾಚಾರ ಮಾಡಿಬೇಕಾಗುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ. ದಿಃ 22.04.2019 ರಿಂದ ಪ್ರತಿವಾದಿಯರು ನಮಗೆ ಬಡ್ಡಿ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನೋಡಿ ಹೇಳಬೇಕಾಗುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ. ನಾನು ಕೊಟ್ಟಿರುವ ಸಾಲಕ್ಕೆ ಪ್ರತಿವಾದಿಯರು ಬಡ್ಡಿ ಕೊಡದೇ ಇರುವುದರಿಂದ ನಮ್ಮ ಮತ್ತು ಅವರ ಮಧ್ಯೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿ.

ಈ ರೀತಿ ವೈಮನಸ್ಸು ಉಂಟಾಗಿದ್ದರಿಂದ ನಾನು ಪದೇ ಪದೇ ಪ್ರತಿವಾದಿಯರ ಮೇಲೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯರು ಕ್ರಯಪತ್ರ ಕೊಡಲು 2 ವರ್ಷ ಕಾಲಾವಕಾಶ ತೆಗೆದುಕೊಂಡಿರುತ್ತಾರೆ ಅಂತ ಪಾಟೀ ಸವಾಲಿನಲ್ಲಿ ಈ ಹಿಂದೆ ಸಾಕ್ಷಿ ನುಡಿದಿದ್ದು ಅದೇ ರೀತಿ ನಿಪಿಃ 1 ಕ್ರಯದ ಕರಾರು ಪತ್ರದ ಪುಟ ಸಂಖ್ಯೆ ಃ 4 ರಲ್ಲಿ ಮೊದಲನೇ ಸಾಲಿನಲ್ಲಿ ಮೂಲದಾಖಲೆಗಳು ಮತ್ತು ಕಾನೂನು ಸಲಹೆಗೆ ಬೇಕಾದಂತಹ ಎಲ್ಲಾ ದಾಖಲೆಗಳನ್ನು ಒಳಗಿಸಿದ ನಂತರ ಮುಂದೆ 2 ವರ್ಷದ ಒಳಗಾಗಿ ಅಂತ ಬರೆದಿರುತ್ತದೆ ಎಂದರೆ ಸರಿ.

ಕ್ರಯದ ಕರಾರುಪತ್ರದಲ್ಲಿ ನಮೂದಿಸಿದ ಪ್ರತಿಫಲದ ಹಣಕ್ಕೆ ಅಡ್ವಾನ್ಸ್ ಆಗಿ ರೂ.1,02,00,000/- ಹಣವನ್ನು ಒಡಂಬಡಿಕೆ ಪತ್ರದ ಪ್ರಕಾರ ಅಸಲಾಗಿ ಪರಿವರ್ತನೆ ಮಾಡಿ ಅಸಲಿಗೆ ಬಡ್ಡಿ ಪಡೆದಿರುತ್ತೇನೆ ಎಂದರೆ ಸರಿ.

ನನಗೆ ಸೇರಿದ ಕರ್ನಾಟಕ ಬ್ಯಾಂಕ್, ಬೆಂಗಳೂರಿನ ಚಿಕ್ಕಪೇಟೆ ಶಾಖೆಯ ಅಕೌಂಟ್ ನಂ. 0562500102236101 ಇರುತ್ತದೆ ಎಂದರೆ ಸರಿ. ನನಗೆ ಪ್ರತಿವಾದಿ ಸುರೇಶ್ ಇವರು ರೂ.2,70,000/- ಗೆ ದಿಃ 13.11.2017 ರಂದು ಹೆಚ್.ಡಿ.ಎಫ್.ಸಿ. ಬ್ಯಾಂಕ್ , ಚಳ್ಳಕೆರೆ ಶಾಖೆಯ ಚೆಕ್‌ನ್ನು ಪ್ರತಿವಾದಿಯು ನನಗೆ ಕೊಟ್ಟಿದ್ದು ಸದರಿ ಚೆಕ್ಕನ್ನು ಕರ್ನಾಟಕ ಬ್ಯಾಂಕಿಗೆ ನಗದೀಕರಣಕ್ಕೆ ಹಾಕಿ ಅದೇ ದಿನ ಹಣ ಬ್ಯಾಂಕಿನಿಂದ ನನ್ನ ಅಕೌಂಟಿಗೆ ರೂ. 2,70,000/- ಜಮಾ ಆಗಿರುತ್ತದೆ ಎಂದರೆ ಸರಿ.

ದಿಃ 28.11.2017 ರಂದು ಹೆಚ್.ಡಿ.ಎಫ್.ಸಿ. ಬ್ಯಾಂಕ್, ಚಳ್ಳಕೆರೆ ಶಾಖೆಯ ಚೆಕ್‌ನ್ನು ಪ್ರತಿವಾದಿಯು ನನಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ನನ್ನ ಅಕೌಂಟಾದ ಕರ್ನಾಟಕ ಬ್ಯಾಂಕ್ ಬೆಂಗಳೂರಿನ ಚಿಕ್ಕಪೇಟೆ ಶಾಖೆಗೆ ನಗದೀಕರಣಕ್ಕೆ ಹಾಕಿ ಅದೇ ದಿನ ಹಣ ಬ್ಯಾಂಕಿನಿಂದ ನನ್ನ ಅಕೌಂಟಿಗೆ ರೂ. 2,70,000/- ಹಣ ಜಮಾ ಆಗಿರುತ್ತದೆ ಎಂದರೆ ಸರಿ.

ದಿಃ 06.12.2017 ರಂದು ಹೆಚ್.ಡಿ.ಎಫ್.ಸಿ. ಬ್ಯಾಂಕ್, ಚಳ್ಳಕೆರೆ ಶಾಖೆಯ ಚೆಕ್‌ನ್ನು ಪ್ರತಿವಾದಿಯು ನನಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ನನ್ನ ಅಕೌಂಟಾದ ಕರ್ನಾಟಕ ಬ್ಯಾಂಕ್

ಬೆಂಗಳೂರಿನ ಚಿಕ್ಕಪೇಟೆ ಶಾಖೆಗೆ ನಗದೀಕರಣಕ್ಕೆ ಹಾಕಿ ಅದೇ ದಿನ ಹಣ ಬ್ಯಾಂಕಿನಿಂದ ನನ್ನ ಅಕೌಂಟಿಗೆ ರೂ. 2,70,000/- ಹಣ ಜಮಾ ಆಗಿರುತ್ತದೆ ಎಂದರೆ ಸರಿ.

( ಪ್ರತಿವಾದಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.